ಓಃಎಸ್ಃನಂ.380/2016

ಪಿ.ಡಬ್ಲ್ಯೂ- 1

**ದಿನಾಂಕಃ 07-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎನ್ ಎಂ ವಕೀಲರಿಂದ**

ರಂಗಪ್ಪನವರು ನನಗೆ ಅಣ್ಣ ಆಗಬೇಕು. ನನ್ನ ತಂದೆಗೆ 4 ಜನ ಗಂಡು ಮಕ್ಕಳಿದ್ದು, ಮೊದಲನೇಯವರು ಹನುಮಂತಪ್ಪ, 2ನೇ ರಂಗಪ್ಪ, 3ನೇ ತಿಮ್ಮಪ್ಪ, 4ನೇಯವನು ನಾನು ಆಗಿರುತ್ತೇವೆ. ನನ್ನಅಕ್ಕ ಲೀಲಾವತಿ ಮತ್ತು ಇನ್ನೊಬ್ಬ ಅಕ್ಕ ಪಾರ್ವತಮ್ಮ ಇರುತ್ತಾರೆ. ನನಗೆ ಈಗ 40 ವರ್ಷ ವಯಸ್ಸು ಆಗಿದೆ ಎಂದರೆ ಸರಿ. ನನ್ನ ಅಕ್ಕನಾದ ಪಾರ್ವತಮ್ಮನವರ ವಿವಾಹವು 1996ನೇ ಇಸವಿಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಮ್ಮ ಮನೆಯ ವ್ಯವಹಾರವನ್ನು ನನ್ನ ಅಣ್ಣನಾದ ಟಿ ರಂಗಪ್ಪನವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಿಮ್ಮ ಅಣ್ಣನವರು ಸಹಿಯನ್ನು ಟಿ.ರಂಗಪ್ಪ ಎಂದು ಹಾಕುತ್ತಾರೆಂದರೆ ಸಾಕ್ಷಿ ರಂಗಪ್ಪ ಟಿ ಎಂದು ಹಾಕುತ್ತಾರೆಂದು ನುಡಿದಿರುತ್ತಾರೆ. ಪ್ರತಿವಾದಿಗಳ ನನಗೆ 2016ನೇ ಇಸವಿಯಿಂದ ನನಗೆ ತೊಂದರೆ ಮಾಡುತ್ತಿರುವ ಕಾರಣ ನಾನು ಸದರಿ ದಾವೆಯನ್ನು ಹೂಡಿರುತ್ತೇನೆ. ಪ್ರತಿವಾದಿಗಳು ನಮ್ಮ ಜಮೀನಿನನ್ನು ಅವರ ಜಮೀನು ಎಂದು ಹೇಳಿಕೊಂಡು ಬಂದು ತೊಂದರೆ ಮಾಡುತ್ತಿದ್ದರು. ದಾವ ಸ್ವತ್ತಿನ ಸರ್ವೆ ನಂ.51 ಪಿ 12 ಆಗಿರುತ್ತದೆ. ನನ್ನ ಅಣ್ಣನವರು ಮುದಿಗೆರೆ ಊರಿನಲ್ಲಿ ವಾಸವಾಗಿದ್ದರು. ನಮ್ಮ ಊರಿನಲ್ಲಿ ತಿಮ್ಮಪ್ಪನವರ ಮಗ ರಂಗಪ್ಪ ಟಿ ಎಂದು ಒಬ್ಬರೆ ಇರುತ್ತಾರೆ.

1999ನೇ ಇಸವಿಯಲ್ಲಿ ನಾನು ಮೈನರ್ ಅಗಿದ್ದೆ ಎಂದರೆ ಸರಿ. ಆ ಸಮಯದಲ್ಲಿ ನಿಮ್ಮ ಮನೆಯ ವ್ಯವಹಾರವನ್ನು ನಿಮ್ಮ ಅಣ್ಣನಂದಿರು ಮತ್ತು ನಿಮ್ಮ ತಾಯಿ ಮಾಡುತ್ತಿದ್ದರು ಎಂದರೆ ಸರಿ. ನಿಮ್ಮ ಅಣ್ಣನವರಿಗೆ ಆರೋಗ್ಯ ಚೆನ್ನಾಗಿದೇ ಎಂದರೆ ಸಾಕ್ಷಿ ನನ್ನ ಅಣ್ಣನಿಗೆ ಕಾಲು ನೋವು ಮತ್ತು ಬಿಪಿ ಇದೆ ಎಂದು ನುಡಿದಿರುತ್ತಾರೆ. ಪ್ರತಿವಾದಿಯರು ಯಾವ ಆಧಾರದ ಮೇಲೆ ದಾವ ಸ್ವತ್ತನ್ನು ಅವರ ಜಮೀನು ಎಂದು ನಿಮ್ಮ ಹತ್ತಿರ ಹೇಳಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನಮ್ಮ ಊರಿನವರೇ ಆಗಿರುತ್ತಾರೆ. ಸರ್ವೆ ನಂ.51/ಪಿ ನಲ್ಲಿ ಒಟ್ಟು 2 ಎಕರೆ ಇದೆ ಎಂದರೆ ಸರಿ. ನಿಮ್ಮಅಣ್ಣನವರಾದ ರಂಗಪ್ಪ ಟಿ ರವರು ಪ್ರತಿವಾದಿಗಳಿಗೆ ನಿಮ್ಮ ಅಕ್ಕನ ಮದುವೆಯ ಖರ್ಚು ವೆಚ್ಚಗಳಿಗಾಗಿ ದಿಃ 16-11-1999 ರಲ್ಲಿ ದಾವ ಸ್ವತ್ತಿನ 1 ಎಕರೆಯನ್ನು 22,500/- ರೂ ಗಳಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು

ನುಡಿದಿರುತ್ತಾರೆ. ದಿನಾಂಕಃ 16-11-1999 ರಂದು ನಿಮ್ಮ ಅಣ್ಣನವರಾದ ರಂಗಪ್ಪ ಟಿ ರವರು ಪ್ರತಿವಾದಿಗಳಿಗೆ ಕರಾರು ಪತ್ರವನ್ನು ಬರೆದುಕೊಟ್ಟು ಅದೇ ದಿನ ಸ್ವಾಧೀನವನ್ನು ಸಹ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ದಾವ ಸ್ವತ್ತಿನ ಚಕ್ಕುಬಂದಿಯನ್ನು ಪೂರ್ವಕ್ಕೆ ಮಹಾಲಿಂಗಪ್ಪ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಶಾಂತಪ್ಪನ ಜಮೀನು, ದಕ್ಷಿಣಕ್ಕೆ  ವಾದಿಯರ ಉಳಿಕೆ ಜಮೀನು ಎಂದು ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅಂದಿನಿಂದಲೂ ಪ್ರತಿವಾದಿಗಳು ಸದರಿ 1 ಎಕರೆ ಜಮೀನಿನಲ್ಲಿ ಸ್ವಾಧೀನವಿದ್ದು ಉಳುಮೆ ಮಾಡಿಕೊಂಡು ಬಂದಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ರಂಗಪ್ಪ ಟಿ ರವರು ನಿಮ್ಮ ಅಕ್ಕನಾದ ಪಾರ್ವತಮ್ಮನವರ ಮದುವೆಯ ಖರ್ಚಿಗಾಗಿ ಹಣ ಅವಶ್ಯಕತೆ ಇದೆ ಎಂದು ಕರಾರು ಪತ್ರದಲ್ಲಿ ನಮೂದು ಮಾಡಿ ಪ್ರತಿವಾದಿಗಳಿಗೆ ದಾವ ಸ್ವತ್ತಿನಲ್ಲಿ 1 ಎಕರೆ ಯನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸದರಿ ಕರಾರು ಪತ್ರಕ್ಕೆ ನಿಮ್ಮ ಅಣ್ಣನಾದ ರಂಗಪ್ಪ ಟಿ ರವರು ಸಹಿ ಹಾಕಿದ್ದು ಮತ್ತು ಸಾಕ್ಷಿದಾರರಾದ ಸುಮಾರು 8 ಜನ ಮತ್ತು  ಪತ್ರ ಬರಹಗಾರರು ಸಹಿ ಹಾಕಿರುತ್ತಾರೆಂದರೆ ಸಾಕ್ಷಿ ಸದರಿ ದಾಖಲಾತಿಯು ಸೃಷ್ಠಿಸಿರುವ ದಾಖಲಾತಿಯಾಗಿರುತ್ತದೆ ಎಂದು ನುಡಿದಿರುತ್ತಾರೆ.

ನಿಮ್ಮ ಅಣ್ಣನಾದ ರಂಗಪ್ಪ ಟಿ ರವರು ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಹೊರಬರುವ ಕಾರಣದಿಂದ ಅವರನ್ನು ನ್ಯಾಯಲಯದ ಮುಂದೆ ಹಾಜರುಪಡಿಸಿರುವುದಿಲ್ಲ, ನೀವು ಪವರ್ ಆಫ್ ಅಟಾರ್ನಿಯಿಂದ ಸದರಿ ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ.  ದಾವ ಸ್ವತ್ತಿನಲ್ಲಿ ಯಾವುದೇ ಕೊಳವೆ ಬಾವಿ ಇರುವುದಿಲ್ಲ, ಮಳೆಯ ಮೂಲಕ ಉಳುಮೆ ಮಾಡಬೇಕು ಎಂದರೆ ಸರಿ. ನನ್ನ ಅಣ್ಣ ರಂಗಪ್ಪ ಟಿ ರವರು ಎಸ್ ಎಸ್ ಎಲ್ ಸಿಯ ವಿದ್ಯಾಭ್ಯಾಸ ಮಾಡಿದ್ದಾರೆ, ಅವರಿಗೆ ಕನ್ನಡದಲ್ಲಿ ಓದಲು ಬರೆಯಲು ಮತ್ತು ಇಂಗ್ಲಿಷ್ ನಲ್ಲಿ  ಸಹಿ ಮಾಡಲು ಬರುತ್ತದೆ ಎಂದರೆ ಸರಿ.  ಪ್ರತಿವಾದಿಗಳು ನೀವು ಅವರ ಸ್ವಾಧೀನದಲ್ಲಿರುವ ಸ್ವತ್ತಿಗೆ ತಂಟೆ ತಕರಾರು ಮಾಡುತ್ತಿದ್ದೀರಾ ಎಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆಂದರೆ ಸಾಕ್ಷಿ ದೂರು ನೀಡಿರುತ್ತಾರೆ, ಆದರೆ ದಾವ ಸ್ವತ್ತಿನಲ್ಲಿ ನಾವೇ ಸ್ವಾಧಿಲೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ.  ಪೊಲೀಸ್ ಠಾಣೆಯಲ್ಲಿ ನಮ್ಮಗಳನ್ನು ಕರೆಸಿ ಇದು ಸಿವಿಲ್ ವ್ಯಾಜ್ಯಕ್ಕೆ ಒಳಪಡುತ್ತದೆ ಕೋರ್ಟಿನಲ್ಲಿ

ತೀರ್ಮಾನ ಮಾಡಿಕೊಳ್ಳಿ ಎಂದು ಸಲಹೆ ನೀಡಿ ಕಳುಹಿಸಿರುತ್ತಾರೆ. ಅದಾದ ನಂತರ ನಾವು ನ್ಯಾಯಾಲಯದಲ್ಲಿ ಸದರಿ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ನಿಮಗೆ ಎಲ್ಲಾ ಸತ್ಯಾಂಶಗಳು ತಿಳಿದಿದ್ದರೂ ಸಹ ದಾವ ಆಸ್ತಿಯನ್ನು ಲಪಾಟಯಿಸಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಅಣ್ಣನವರು ಪ್ರತಿವಾದಿಗಳಿಗೆ ಕರಾರು ಪತ್ರ ಬರೆದುಕೊಟ್ಟು ಸ್ವಾಧೀನವನ್ನು ಬಿಟ್ಟು ಕೊಟ್ಟ ಕಾರಣ ಪ್ರತಿವಾದಿಗಳು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯ ಮಕ್ಕಳು ನಿಮ್ಮಗಳ ಹತ್ತಿರ ಬಂದು ಶುದ್ಧ ಕ್ರಯಪತ್ರವನ್ನು ನೋಂದಣಿ ಮಾಡಿಕೊಡಿ ಎಂದು ಕೇಳಿಕೊಂಡಾಗ ನೀವು ತಕರಾರು ಮಾಡಿ ಸದರಿ ದಾವೆಯನ್ನು ಹೂಡಿರುತ್ತಾರೆಂದರೆ ಸರಿಯಲ್ಲ. ಸದರಿ ದಾವ ಸ್ವತ್ತಿನಲ್ಲಿ ಪ್ರತಿವಾದಿಗಳು ರಾಗಿ, ಹುರುಳಿ, ಶೇಂಗಾ ಬೆಳೆಯುತ್ತಿದ್ದಾರೆಂದರೆ ಸಾಕ್ಷಿ ಸುಳ್ಳು ನಾವು ಬೆಳೆಯುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಈಗಿನ ಮಾರುಕಟ್ಟೆಯಲ್ಲಿ ಜಮೀನಿನ ಬೆಲೆಯು ಹೆಚ್ಚಾಗಿರುವ ಕಾರಣದಿಂದ ನೀವು ಪ್ರತಿವಾದಿಗಳಿಂದ ದಾವ ಸ್ವತ್ತನ್ನು ಪಡೆದುಕೊಳ್ಳಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನಿಮ್ಮ ಅಕ್ಕಪಕ್ಕದ ಜಮೀನುದಾರಿಗೆಗೆ ತಿಳಿದಿದೆಯೇ ಎಂದರೆ ಸಾಕ್ಷಿ ತಿಳಿದಿದೆ ಎಂದು ನುಡಿದಿರುತ್ತಾರೆ. ನಿಮ್ಮ ಅಕ್ಕಪಕ್ಕದ ಜಮೀನಿನಲ್ಲಿ ಇರುವವರನ್ನು ಸಾಕ್ಷಿದಾರರನ್ನಾಗಿ ಮಾಡಲು ನಿಮಗೆ ಯಾವುದೇ ಅಭ್ಯಂತರ ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**